# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ.4/2018

ಅ.ಸಾ ಃ **5**
ದೋಸಾ ಃ **6**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ವಿ. ದಾಸಪ್ಪ |
| ತಂದೆಯ ಹೆಸರು | ಃ | ಗುಡ್ಡಪ್ಪ |
| ವಯಸ್ಸು | ಃ | **65** ವರ್ಷ |
| ಉದ್ಯೋಗ | ಃ | ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಹೆಸ್ಕಾಂ |
| ವಾಸ ಸ್ಥಳ | ಃ | ಸವಣೂರ |

ದಿನಾಂಕಃ**04/07/2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –**

1 ನಾನು ದಿನಾಂಕ 29.09.2016 ರಿಂದ ದಿನಾಂಕ 31.07.2021 ರವರೆಗೆ ಎ.ಇ.ಇ. ಹೆಸ್ಕಾಂ ಸವಣೂರು ಎಂದು ಕೆಲಸ ಮಾಡಿದ್ದೇನೆ. ಶಿಗ್ಗಾಂವ ಉಪ-ವಿಭಾಗದ ಪ್ರಭಾರ ನನಗೆ ಇತ್ತು. ಇಂದು ಹಾಜರು ಇರುವ 1ನೇ ಆರೋಪಿ ಶಿಗ್ಗಾಂವ ಉಪ-ವಿಭಾಗದ ಬಂಕಾಪುರ ಹೆಸ್ಕಾಂ ಸೆಕ್ಷನ್ ಆಫೀಸರ್ ಎಂದು ಕೆಲಸ ಮಾಡುತ್ತಿದ್ದರು.

2. ದಿನಾಂಕ 09.08.2017 ರಂದು ರಾತ್ರಿ 10.00 ಗಂಟೆಯ ಹೊತ್ತಿಗೆ ಎ.ಸಿ.ಬಿ. ಪೊಲೀಸರು ನನಗೆ ಫೋನ್ ಕರೆ ಮಾಡಿ 1 ಮತ್ತು 2 ನೇ ಆರೋಪಿತರನ್ನು ಟ್ರ್ಯಾಪ್ ಮಾಡಿದ್ದಾಗಿ ಹೇಳಿ, ಬಂಕಾಪುರ ಶಾಖೆಗೆ ಬರುವಂತೆ ತಿಳಿಸಿದರು. ನಾನು ಅಲ್ಲಿಗೆ ಹೋದೆ. ಪೊಲೀಸರು ಪಂಚನಾಮೆ ಮಾಡುತ್ತಿದ್ದರು. ಪಂಚನಾಮೆಗೆ ನನ್ನ ಸಹಿ ಪಡೆದರು. ಈಗ ತೋರಿಸಿದ ನಿಪಿ-4 ಟ್ರ್ಯಾಪ್ ಪಂಚನಾಮೆಯ ಮೇಲೆ ಇರುವ ಸಹಿಗಳು ನನ್ನವೇ ಇದ್ದು ನನ್ನ ಒಂದು ಸಹಿಯನ್ನು ನಿಪಿ-4 (ಡಿ) ಎಂದು ಗುರುತಿಸಲಾಯಿತು. ಒಂದು ಆಡಿಯೋ ಕೇಳುವಂತೆ ಹೇಳಿದರು. ನಾನು ಸದರಿ ಆಡಿಯೋ ಕೇಳಿ

ಅದರಲ್ಲಿರುವ ದ್ವನಿ 1 ನೇ ಆರೋಪಿ ಶಿವಾನಂದ ಹಾದಿಮನಿ ಧ್ವನಿ ಎಂದು ಹೇಳಿದೆ. ಸದರಿ ಧ್ವನಿಯನ್ನು ಆಲಿಸಿದರೆ ಗುರುತಿಸಬಲ್ಲೆ.

(ಮಾನ್ಯ ಎಸ್.ಪಿ.ಪಿ. ವಿನಂತಿ ಮೇರೆಗೆ ಸಿಲ್ಡ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರಲ್ಲಿಯ ಡಿವಿಡಿಯನ್ನು ವಿಶೇಷ ಅಭಿಯೋಜಕರು ತರಿಸಲಾದ ಲ್ಯಾಪಟ್ಯಾಪನಲ್ಲಿ ಅಳವಡಿಸಿ ತೆರೆದ ನ್ಯಾಯಾಲಯದಲ್ಲಿ ಧ್ವನಿಯನ್ನು ಆಲಿಸಲು ಪ್ರಯತ್ನಿಸಲಾಯಿತು. ಯಾವುದೇ ಆಡಿಯೋ ಸಂವಾದ ಕೇಳಿಸಲಿಲ್ಲ. ಸದರಿ ಡಿವಿಡಿಯನ್ನು ಮು.ಮಾ. 12 ಎಂದು ಗುರುತಿಸಲಾಯಿತು).

(ನಿಪಿ-9 ಸಿಡಿಯನ್ನು ವಿಶೇಷ ಅಭಿಯೋಜಕರು ತರಿಸಲಾದ ಲ್ಯಾಪಟ್ಯಾಪನಲ್ಲಿ ಅಳವಡಿಸಿ ತೆರೆದ ನ್ಯಾಯಾಲಯದಲ್ಲಿ ಧ್ವನಿಯನ್ನು ಆಲಿಸಲಾಯಿತು.) ಈಗ ಆಲಿಸಿದ ಸಂಭಾಷಣೆಯಲ್ಲಿ 2 ನೇ ಆರೋಪಿ ಶಿವಾನಂದ ಪಾಟೀಲರ ಧ್ವನಿ ಇರುತ್ತದೆ. ಆ ರಾತ್ರಿ ಬೆಳಗಿನ ಜಾವ 3.00 ಗಂಟೆಗೆ ಚಾಸಾ-1 ಮೆಳ್ಳಾಗಟ್ಟಿಯವರ ಜಮೀನಿಗೆ ಹೋಗಿ ನೋಡಿದಾಗ 11 ಕೆ.ವಿ. ಟ್ರಾನ್ಸಫರ್ಮರ್ ಚಾರ್ಜ ಇದ್ದದ್ದು ಕಂಡು ಬಂತು. ರಾತ್ರಿ ಸರಿಯಾಗಿ ಕಾಣಿಸದೇ ಇದ್ದುದರಿಂದ ಬೆಳಿಗ್ಗೆ 10.30 ಕ್ಕೆ ಹೋಗಿ ನೋಡಿದಾಗ ಎಲ್.ಟಿ. ಲೈನ್ ಕೆಲಸ ಆಗದೇ ಇದ್ದದ್ದು ಕಂಡು ಬಂತು.

3. ತನಿಖೆ ಕಾಲಕ್ಕೆ ಪೊಲೀಸರು ಕೇಳಿದ ದಾಖಲೆಗಳನ್ನು ನೀಡಿರುತ್ತೇನೆ. ಪೊಲೀಸರ ಮನವಿಯನ್ನು ಈಗ ನಿಪಿ -14, ನನ್ನ ಪತ್ರವನ್ನು ನಿಪಿ -15 ಎಂದು ಗುರುತಿಸಲಾಯಿತು. ನಿಪಿ-15 ಕ್ಕೆ ಲಗತ್ತಿಸಿದ ಮೆಮೋರೆಂಡಮ್ ಹಾಗೂ ತಖ್ತೆಯನ್ನು ಒಟ್ಟಾಗಿ ನಿಪಿ-16, ಎಸ್ಟಿಮೇಟ್ ಪ್ರತಿಯನ್ನು ನಿಪಿ-17, ನನ್ನ ಸಹಿಯನ್ನು ನಿಪಿ 17(ಎ), ಮಂಜೂರಾತಿ ಪ್ರತಿಯನ್ನು ನಿಪಿ-18, ಚಾಸಾ-1 ಹಣ ತುಂಬಿದ 4 ರಶೀದಿಗಳನ್ನು ನಿಪಿ-19, ಎಸ್ಟಿಮೇಟ್ ಅಬ್‌ಸ್ಟ್ರ್ಯಾಕ್ಟನ್ನು ನಿಪಿ-20, ವರದಿಯನ್ನು ನಿಪಿ-21, ಎಲ್.ಟಿ. ಲೈನ್ ಎಸ್ಟಿಮೇಟ್‌ನ್ನು ನಿಪಿ-22, ಲೈನ್ ಸ್ಕೆಚ್‌ನ್ನು ನಿಪಿ-23, ಎನರ್ಜಿ ಕ್ಯಾಲ್ಕುಲೇಶನ್ ಶೀಟನ್ನು ನಿಪಿ-24, ಇನ್ನೊಂದು ವರದಿಯನ್ನು ನಿಪಿ-25, ಚಾಸಾ-1ರ ಅರ್ಜಿ ಪ್ರತಿಯನ್ನು ನಿಪಿ-26, ನಮೂನೆಯಲ್ಲಿ ಸಲ್ಲಿಸಿದ ಅರ್ಜಿಯನ್ನು ನಿಪಿ-27, ತಹಶೀಲ್ದಾರರ ಪ್ರಮಾಣಪತ್ರವನ್ನು ನಿಪಿ-28, ಒಂದು ನಕ್ಷೆಯನ್ನು ನಿಪಿ-29, ಪ್ರಮಾಣಪತ್ರವನ್ನು ನಿಪಿ-30, ಕೊಳವೆ ಬಾವಿ ವರದಿಯನ್ನು ವರದಿಯನ್ನು ನಿಪಿ-31, ವೋಟರ್ ಐಡಿ ಪ್ರತಿಯನ್ನು ನಿಪಿ-32, ಪಹಣಿಯನ್ನು ನಿಪಿ-33 ಎಂದು ಗುರುತಿಸಲಾಯಿತು. ಅಲ್ಲದೇ ಅನುಬಂಧ-1 ನ್ನು ನಿಪಿ-34, ವರದಿಯನ್ನು ನಿಪಿ-35 ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದರು.

**ಪಾಟೀ ಸವಾಲುಃ 1 ನೇ ಆರೋಪಿ ಪರಃ ಶ್ರೀ ಯು.ಎನ್.ಜಿ. ವಕೀಲರಿಂದಃ-**

4. ನನಗೆ ಫೋನ್ ಕರೆ ಮಾಡಿದ ವ್ಯಕ್ತಿಯ ಹೆಸರು ಹುದ್ದೆ ನೆನಪು ಇಲ್ಲ. ಆ ದಿನ ನಾನು ಹಾವೇರಿಯ ನಿವಾಸಿಯಾಗಿದ್ದೆ. ನಿಪಿ-4 ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ

ಅನ್ನುವುದು ನಿಜ. ಟಿ.ಸಿ. ಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಿದ ನಂತರ ಶಾಖಾಧಿಕಾರಿ ಹತ್ತಿರ ಯಾವುದೇ ಕೆಲಸ ಬಾಕಿ ಇರುವುದಿಲ್ಲ ಎನ್ನುವುದು ನಿಜ. ಎಲ್.ಟಿ. ಲೈನ್ ದುರಸ್ಥಿ ಕೆಲಸ ಶಾಖಾಧಿಕಾರಿ ಜವಾಬ್ದಾರಿ ಅಲ್ಲ ಅನ್ನುವುದು ನಿಜ. ಸದರಿ ಕೆಲಸಕ್ಕೆ ಪ್ರತ್ಯೇಕ ತಂಡ ಇರುತ್ತದೆ ಎನ್ನುವುದು ನಿಜ. ಅರ್ಜಿ ಕ್ರಮ ಸಂಖ್ಯೆಗನುಗುಣವಾಗಿ ಸದರಿ ಕೆಲಸ ಮಾಡಲಾಗುತ್ತದೆ ಎನ್ನುವುದು ನಿಜ. ಪಂಚನಾಮೆಗೆ ಸಹಿ ಮಾಡುವಾಗ ಆಲಿಸಿದ ಧ್ವನಿ ಸ್ಪಷ್ಟವಾಗಿರಲಿಲ್ಲ ಎನ್ನುವುದು ನಿಜ. ನಾನು ಧ್ವನಿ ಪರಿಣಿತನಲ್ಲ. ಚಾಸಾ-1 ರಿಗೆ ನಿಪಿ-18 ನ್ನು ದಿನಾಂಕ 05.11.2014 ರಂದು ನೀಡಿದ್ದೇವೆ ಎನ್ನುವುದು ನಿಜ. ದಿನಾಂಕ 03.12.2014 ರಂದು ನಿಪಿ-19 ರ ಮೂಲಕ ಚಾಸಾ-1 ಹಣ ತುಂಬಿದ್ದಾರೆ. ನಿಪಿ-34 ರ ಮೂಲಕ ಚಾಸಾ-1 ರಿಗೆ ದುಡ್ಡು ತುಂಬಿದ ದಿನವೇ ಆರ್.ಆರ್. ಸಂಖ್ಯೆ ನೀಡಿದೆ ಎನ್ನುವುದು ನಿಜ. ವಿದ್ಯುತ್ ಪೂರೈಕೆ ಪ್ರಾರಂಭವಾದ ನಂತರ ಆರ್.ಆರ್. ಸಂಖ್ಯೆ ನೀಡಲಾಗುತ್ತದೆ ಎನ್ನುವುದು ನಿಜ. ಆರ್.ಆರ್. ಸಂಖ್ಯೆ ಸಂಬಂಧ ಶಾಖಾಧಿಕಾರಿ ಹತ್ತಿರ ಯಾವುದೇ ಕೆಲಸ ಉಳಿಯುವುದಿಲ್ಲ ಎನ್ನುವುದು ನಿಜ. ನಾವು ಜಮೀನಿಗೆ ಹೋದಾಗ ಟಿ.ಸಿ. ಲೈನ್ ಸರಿಯಾಗಿತ್ತು ಅಂದರೆ ನಿಜ. ಪಂಚಾನಾಮೆ ಕಾಲಕ್ಕೆ ನನ್ನ ಒಟ್ಟು ಎಷ್ಟು ಸಹಿ ಪಡೆದರು ಎನ್ನುವುದು ನೆನಪು ಇಲ್ಲ.

5. ಟ್ರ್ಯಾಪ್ ಆಗಿದೆ ಎಂದು ನನ್ನನ್ನು ಯಾರೂ ಕರೆದಿಲ್ಲ, ನಾನು ಹೋಗಿಲ್ಲ, ಧ್ವನಿ ಆಲಿಸಿಲ್ಲ ಮತ್ತು ಜಮೀನಿಗೆ ಹೋಗಿಲ್ಲ ಅನ್ನುವುದು ಸುಳ್ಳು. ಪೋಲೀಸರಿಗೆ ಅನುಕೂಲವಾಗುವಂತೆ ದಾಖಲೆಗಳನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅನ್ನುವುದು ಸುಳ್ಳು. ಪೋಲೀಸರು ನನ್ನ ಹೇಳಿಕೆ ಪಡೆದಿಲ್ಲ ಅನ್ನುವುದು ಸುಳ್ಳು.

<u>ಮರುಹೇಳಿಕೆ</u>: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.